# ಹೃದಯ ರೋಗ ಪತ್ತೆ ಕೇಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೃದಯ ಸಂಬಂಧಿ ರೋಗಗಳ ಪತ್ತೆಗೆ ಅತ್ಯಾಧುನಿಕ ಪರೀಕ್ಷೆಗಳೆಲ್ಲವನ್ನೂ ಒಂದೇ ಕಡೆ ಒದಗಿಸುವ 'ವೈವಸ್ ಹೆಲ್ತ್ ಸೆಂಟರ್' ಭಾರತದಲ್ಲೇ ಪ್ರಥಮ ರೋಗಪತ್ತೆ ಕೇಂದ್ರ ಎಂದು ಹೃದಯ ರೋಗತಜ್ಞ ಡಾ. ಎಸ್.ಎಸ್. ರಮೇಶ್ ಹೇಳಿದರು.

ರಕ್ತ ಸಕ್ಕರೆ ಅಂಶ ಪತ್ತೆ, ಕೊಲೆಸ್ಟ್ರಾಲ್ ಪತ್ತೆಯಂತಹ ಪರೀಕ್ಷೆಗಳಲ್ಲದೆ ಹೃದಯ ರೋಗಕ್ಕೆ ಕಾರಣವಾಗುವ ಎಚ್‌ಎಸ್‌ಪಿ ಆರ್‌ಪಿ, ಹೋಮೋಸಿಸ್ಟೀನ್ ಮಟ್ಟ, ಅಪೊಲಿಪೊಪ್ರೊಟೀನ್ (ಎ), ಫೈಬ್ರಿನೋಜೆನ್‌ಗಳ ವಿಶ್ಲೇಷಣೆ ನಡೆಯುತ್ತದೆ.

ಅತ್ಯಂತ ವಿರಳವಾದ ಅತ್ಯಾಧುನಿಕ 'ಮಲ್ಟಿಸ್ಲೈಸ್ ಸಿ.ಟಿ. ಮೆಷಿನ್' ಕೂಡ ಈ ಕೇಂದ್ರದಲ್ಲಿ ಲಭ್ಯವಿದ್ದು ಕರ್ನಾಟಕದಲ್ಲಿ 'ಕಾರ್ಟಾಯಿಡ್ ಇಂಟಿಮಲ್ ಥಿಕ್‌ನೆಸ್ ಟೆಸ್ಟ್' ನಡೆಸುವ ಮೊದಲ ಕೇಂದ್ರ ಇದಾಗಿದೆ. ಹೊಸ ಬಗೆಯ ಪರೀಕ್ಷೆಗಳಾದ 'ಆಂಕಲ್ ಬ್ರೇಕಿಯಲ್ ಇಂಡೆಕ್ಸ್' ಮತ್ತು 'ಟಿಲ್ಟ್ ಟೇಬಲ್ ಸ್ಟಡಿ'ಯೂ ಕೇಂದ್ರದ ವೈಶಿಷ್ಟ್ಯಗಳಲ್ಲೊಂದು. ಸದ್ಯದಲ್ಲೇ ಬೆಂಗಳೂರಿನ ವಿವಿಧ ಕಡೆಗಳಲ್ಲಿ ತಪಾಸಣೆಗೆ ಆಹಾರ ಸೇವನೆಗೆ ಮುಂಚಿನ ರಕ್ತ ಪರೀಕ್ಷೆಗಾಗಿ ರಕ್ತ ಸಂಗ್ರಹ ನಡೆಸುವ ಯೋಜನೆ ಇದ್ದು, ಆಹಾರ ಸೇವನೆಯ ನಂತರ ಅವರು ಕೇಂದ್ರಕ್ಕೆ ಭೇಟಿ ನೀಡಿ ಇತರ ಪರೀಕ್ಷೆಗಳನ್ನು ಮಾಡಿಸಬಹುದಾದ ವ್ಯವಸ್ಥೆ ಜಾರಿಯಾಗಲಿದೆ ಎಂದು ರಮೇಶ್ ವಿವರಿಸಿದರು. ಮಧ್ಯಾಹ್ನ ಊಟದ ಸಮಯದಲ್ಲೂ ಒಂದು ಗಂಟೆಯಲ್ಲೇ ಪರೀಕ್ಷೆ ಮಾಡಿಸಬಹುದು; ಇಲ್ಲವೆ ಹೆಚ್ಚೆಂದರೆ ನಾಲ್ಕು ತಾಸುಗಳಲ್ಲಿ ಹೆಚ್ಚಿನ ಪರೀಕ್ಷೆಗಳೆಲ್ಲ ನಡೆದು ಅದರ ವರದಿಯನ್ನೂ ಕೊಂಡೊಯ್ಯಬಹುದು.

ಅಲ್ಲದೆ ದಂತ, ಕಿವಿ ಮೂಗು ಗಂಟಲು ಹಾಗೂ ಕಣ್ಣಿನ ತಪಾಸಣೆಗೂ ಅವಕಾಶವಿರುವ ಕೇಂದ್ರದ ಇತರ ಶಾಖೆಗಳನ್ನು ಕರ್ನಾಟಕದ ಇತರ ಊರುಗಳಲ್ಲೂ ತೆರೆಯುವ ಯೋಜನೆ ಇದೆ ಎಂದರು.